231

ಮೈಸೂರ ಗೆಜೆಟ್ಟು.

ನಂ. 34 ಸರ್ಕಾರದಿಂದ ಫಾಯಿಷ್ ಆದ್ದು. ಸನ್ 1889.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 24, ಸನ್ 1889.

ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪೆಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 31ನೇ ಜುಲೈ 1889.

ನಂ. 107.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸವಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಚ್ಛಾನುಸಾರೀ ವೇಳೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೇವಲಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರ್ಯ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜ್ರಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ಗಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನ್ಲಾಗಲಿ ಅಂದಾಜಾ ಬೀಜವರೀ ವಿಷಯದ ಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಸಾಲಿಯಾನಾ ಸ ಅಂದಾಜಿ ಹುರಕಾರ್ಕ್ಕೆ ಕೊಟ್ಟುವಳೀ ಯಾಡಬೇಕಾದ ಕ್ಯೆ ಪೆರೆಂಟೆ.		ಯಾವ ಬಾಕಿಗೋ ಸ್ಕರ ಗ್ರಾಮವು ಹರಾಜ್ ಮಾಡಲ್ಪ ಡುತ್ತೋ ಅಂಥಾ ಸ ರಕಾರದ ಕಂದಾಯ ದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ಹೊಸಕೋಟೆ	ನಂದಗುಡಿ	ಯಿಟ್ಟಸಂದ್ರ	ವೆಂಕಟದಾಸಪ್ಪ	47 16 4	362 14 7	293 4 0	183 11 6 ಮತ್ತು ಬಡ್ಡಿ	ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್ರ ರೂಬರೂ 1889ನೇ ಇಸವಿ ಸೆಪ್ಟಂಬರ್ ತಾರೀಖು 10ರಲ್ಲು.
	ಬೆಂಗಳೂರು	ಯಲಹಂಕ	ಮಾದರಹಳ್ಳಿ	ವಿ. ಅಬ್ದುಲ್‌ಖಾದರ್	92 12 8¼	159 14 10	123 1 7	76 2 3 ಮತ್ತು ಬಡ್ಡಿ	ಡಿಟೋ ಡಿಟೋ ತಾರೀಖು 12ರಲ್ಲು

ಪರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲವೆ.

ತಾರೀಖು 8ನೇ ಆಗಸ್ಟ್ 1889.

ನಂ. 116.—ನಗರ ತಾಲ್ಲೂಕು ಅಮಲ್‌ದಾರ್ ಟಿ. ಯಂ. ನಾರಣಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಟಿ. ಯಂ. ನಾರಣಯ್ಯನವರು ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವವರಿಗೂ, ಶಿವಮೊಗ್ಗಾ ಡಿಸ್ಟ್ರಿಕ್ಟು ಆಫಿಸ್ ಹೆಡ್ ಮುನಷಿ ಅನಂತರಾಮಯ್ಯಂಗಾರ್ರು, ನಗರ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸವನ್ನು ಆಕ್ಟಿಂಗ್ ತರೀಕು ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಆಗಸ್ಟ್ 1889.

ನಂ. 117.—ಮೊಳಕಾಲ್‌ಮುರು ತಾಲ್ಲೂಕು ಅಮಲ್‌ದಾರ್ ಕಸ್ತೂರಿರಂಗಾಚಾರ್ ಯವರಿಗೆ 1889ನೇ ಇಸವಿ ಜುಲೈ 2ನೇ ತಾರೀಖು ಲಾಗಾಯತು ಯರಡು ತಿಂಗಳೂ ಹದಿಮೂರು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಅಮಲ್ದಾರ್ ಕಸ್ತೂರಿ ರಂಗಾಚಾರ್ಯ್ರ ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವವರಿವಿಗೂ, ಹೊಸ ದುರ್ಗದ ಸಬ್ ತಾಲ್ಲೂಕು ಡಿಪಟಿ ಅಮಲ್ದಾರ್ ವೆಂಕಟರಾಯರು ಮೊಳಕಾಲ್ಮುರು ತಾಲ್ಲೂಕು ಅಮದಾರ್ ವ 3ನೇ ಕ್ಲಾಸ್ ಮಾಜಿ ಸ್ಟ್ರೇಟ್ ಕೆಸಲವನ್ನ ಆಕ್ಟಿಂಗ್ ತರೀಕು ನೋಡುವಂತೆ ಮೊಕರ್ರಾಡಲ್ಪಟ್ಟಿರುತ್ತಾರೆ.

ವೆಂಕಟರಾಯರು ಮತ್ತೊಂದು ಕೆಲಸದಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವವರಿವಿಗೂ, ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫಿಸ್ ರೆವಿನ್ಯು ಹೆಡ್ ಮುನಷಿ ಅಬ್ದುಲ್ ರಹೀಂಮೇಕರಿ ಬಿ. ಎ. ಯವರು ಹೊಸದುರ್ಗದ 1 ನೇಗ್ರೇಡ್ ಡೆಪ್ಯುಟಿ ಅಮಲ್ದಾರ್ರಾಗಿಯೂ, 3ನೇ ಕ್ಲಾಸ್ ವೇಜಸ್ಟ್ರೇಟರಾಗಿಯೂ ಆಕ್ಟಿಂಗ್ ತರೀಕೆ ಕೆಲಸನೋಡುವಂತೆ ಮೊಕರ್ರಾಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಆಗಸ್ಟ್ 1889.

ನಂ. 118.—ಯಿದರಡಿ ಕಂಡ ಅಸಿಸ್ಟೆಂಟ್ ಕಮ್ಮಿಷನರ್ಗಳ ವ ರೆವಿನ್ಯೂ ಸರ್ವೇ ಪ್ರೊಬೇಷನರ ಮೊಕರರಾತಿಯನ್ನ ಮಂಜೂರ್ಮಾಡೋಣಾಗಿರುತ್ತೆ.

ಮೆ।। ಎ. ರಾಘವೇಂದ್ರರಾಯರು 4ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಸಬ್ ಪ್ರೋಟೆಂ ತರೀಕು ಮೊಕರರು.

ಮೆ।। ಹಾರ್ಡಿಯವರು, 4ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಸಬ್ ಪ್ರೋಟೆಂ ತರೀಕು ಮೊಕರರು.

ಕ್ಲೋಸ್ ಪೇಟೆ ತಾಲ್ಲೂಕು ಅಮಲ್ದಾರ್ ಮೆ।। ಕೇ. ಶ್ರೀನಿವಾಸರಾಯರು ರೆವಿನ್ಯೂ ಸರ್ವೇ ಇಲಾಖೆ ಪ್ರೋಬೇಷನರಾಗಿ ಮೊಕರರು.

ನಂ. 119.—ಚಾಮರಾಜನಗರ ತಾಲ್ಲೂಕು (5ನೇ ಕ್ಲಾಸ್) ಅಮಲ್ದಾರ್ ಗೋವಿಂದಪ್ಪನವರಿಗೆ, ಅವರು ಮಾಡಿದ ವಿಶೇಷ ಮೆಹನತಿಗಾಗಿ, 4ನೇ ಕ್ಲಾಸಿಗೆ ಬಡ್ತಿಮಾಡೋಣಾಗಿರುತ್ತದೆ, ಯಿದು 1889ನೇ ಇಸವಿ ಜುಲೈ 15ರ ಲಾಗಾಯತು ಜಾರೀಲಿಬರ ತಕ್ಕದ್ದು.

ನಂ. 120.—ಇದರಡೀ ಕಂಡ ಅಮಲ್ದಾರ್ರುಗಳು ಹಾಲಿ ಖಾಲೀರುವ ಜಾಗಾಗಳಿಗೆ ಭರ್ತಿಯಾಗಿ ಬಡ್ತೀ ಮಾಡಲ್ಪಟ್ಟಿರುತ್ತಾರೆ.

2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ.

ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ಕುಪ್ಪುಸಾಮಿನಾಯಡಿಯವರು.

3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.

1. ಹೊಸಕೋಟೆ ತಾಲ್ಲೂಕು ಅಮಲ್ದಾರ ಡಿ. ವೆಂಕಟರಮಣಯ್ಯನವರು.
2. ಕೋಲಾರ ತಾಲ್ಲೂಕು ಅಮಲ್ದಾರ್ ಅಬ್ದುಲ್ಅಜೀಜೆಯವರು.

4ನೇಕ್ಲಾಸಿನಿಂದ 3ನೇ ಕ್ಲಾಸಿಗೆ.

1. ನುದ್ದಗಿರೀ ತಾಲ್ಲೂಕು ಅಮಲ್ತಿನರ ಸಿ. ಕಾಮಯ್ಯಂಗಾರ್ರು.
2. ತಿರುಮಕೂಡ್ಲು ನರಸೀಪುರ ತಾ।। ಅಮಲ್ದಾರ್ ಎಂ. ಕೃಷ್ಣಯ್ಯಂಗಾರ್ರು.
3. ಮಂಜರಾಬಾದ್ ತಾ। ಅಮಲ್ದಾರ್ ಸಿ. ಡಿ. ರಾಮಸ್ವಾಮಿಯ್ಯನವರು.
4. ಕುಣಿಗಲ್ ತಾ।। ಅಮಲ್ದಾರ್ ಯಂ. ಕೃಷ್ಣರಾವ್.

5 ಕ್ಲಾಸಿನಿಂದ 4ನೇ ಕ್ಲಾಸಿಗೆ.

1. ಜಗಲೂರು ತಾ। ಅಮಲ್ದಾರ್ ಆರ್. ಲಕ್ಷ್ಮಣರಾಯರು.
2. ಕ್ಲೋಸ್‌ಪೇಟೆ ತಾ। ಅಮಲ್ದಾರ್ ಕೆ. ಶ್ರೀನಿವಾಸರಾಯರು (ಬೇರೇ ಕೆಲಸಕ್ಕೆ)
3. ಸಿಕಾರಿಪುರ ತಾ।। ಅಮಲ್ದಾರ್ ನಾಗೇಶರಾಯರು.
4. ಹಾಸನ ತಾ।। ಅಮಲ್ದಾರ್ ಹೆಚ್. ಆರ್. ಶ್ರೀನಿವಾಸರಾವ್.
5. ತರೀಕೆರೆ ತಾ। ಅಮಲ್ದಾರ್ ಕೃಷ್ಣಪ್ಪನವರು.
6. ಬವರಿಂಗ್‌ಪೇಟೆ ತಾ।। ಅಮಲ್ದಾರ್ ರಾಜುವೊದಲಿಯಾರ್ರು.

ನಂ. 121.—ಈ ಕೆಳಗೆ ನಮೂದಾಗುವವರನ್ನ ಅಜಮಾಯಿಷಿ ಮೇಲೆ 5ನೇ ಕ್ಲಾಸ್ ಅಮಲ್ದಾರರುಗಳಾಗಿ ಮೊಕರರ್ಮಾಡೋಣಾಗಿರುತ್ತೆ.

1. ಹಾಸನ ಡಿಸ್ಟ್ರಿಕ್ಟ್ ರೆವಿನ್ಯೂ ಕಿರಸ್ತೇದಾರ್ ವೆಂಕಟಸುಬ್ಬಯ್ಯನವರು.
2. ಕೋಲಾರ ಡಿಸ್ಟ್ರಿಕ್ಟ್ ಹೆಡ್ ಕ್ಲರ್ಕ್ ಬೇಲೀ ಶ್ರೀನಿವಾಸರಾಯರು.
3. ಬೆಂಗಳೂರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಪೋಲೀಸ್ ಇನ್‌ಸ್ಪೆಕ್ಟರ್ ನಂಜುಂಡನಾಯಡರು.
4. ಗ್ರಾಮದ ಡೆಪ್ಯುಟಿ ಅಮಲ್ದಾರ್ ಸಿ. ಕೃಷ್ಣರಾಯರು.
5. ರಿವಾರವರ ಆಫಿಸ್ ಕ್ಲರ್ಕ್ ಟಿ. ಬಾವಾರಾವ್ ಬಿ. ಎ. ಯವರು.
6. ಬೆಂಗಳೂರು ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಬೇಷನರ್ ಸಿ. ರಾಜಗೋಪಾಲಾಚಾರ್ ಬಿ. ಎ. ಯವರು.
7. ರೈಲ್ವೇ ಸೂಪರಿನ್ಟೆಂಡರಿ ಎಸ್. ಶ್ರೀನಿವಾಸರಾಯರು.
8. ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ ವೆಂಕಟರಾಯರು.

ನಂ. 122.—ಇದರಡಿ ಕಂಡ ಡಿಪ್ಯುಟಿ ಅಮಲ್ದಾರರುಗಳ ನೊಕರಾತಿಯನ್ನ ಮಾಡೋಣಾಗಿರುತ್ತದೆ.

1. ತುಮಕೂರು ಡಿಸ್ಟ್ರಿಕ್ಟ್ ಜುಡಿಷಲ್ ಹೆಡ್ ಮುನಷಿ ಕೃಷ್ಣರಾವ್.
2. ಚಿತ್ರದುರ್ಗ ಡಿಸ್ಟ್ರಿಕ್ಟ್ ರವಿನ್ಯೂ ಹೆಡ್ ಮುನಷೀರು ಅಬ್ದುಲ್‌ರಹೀಂ ಸೇಕರಿಯವರು.
3. ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಇನ್‌ಸ್ಪೆಕ್ಟರ್ ಮಹಮ್ಮದ್ ರಜಾಯವರು.
4. ದಿವಾನರವರ ಆಫಿಸ್ ಕ್ಲರ್ಕ್ ಬಾದಾಮಿ ಕೃಷ್ಣರಾವ್.

ತಾರೀಖು 15ನೇ ಆಗಸ್ಟು 1889.

ನಂ. 123.—ಇದರಡೀ ನಮೂದಾಗುವ ಮೇರಿಗೆ ಅಮಲ್ದಾರರುಗಳ ವ ಡಿಪ್ಯುಟಿ ಅಮಲ್ದಾರರುಗಳ ವರ್ಗಾವರ್ಗಿ ವ ಮೊಕರರಾತಿಗಳು ಮಂಜೂರ್ಮಾಡೋಣಾಗಿರುತವೆ.

ಕಾರ್ಕಾರ್ಹಳ್ಳಿ ತಾಲ್ಲೂಕು ಅಮಲ್ದಾರ್ ಸಿ. ಕೃಷ್ಣಯ್ಯರು, ಕೆಲಸದಿಂದ ನಿವೃತ್ತರಾದ ಈಸ್ತೂರಿ ರಂಗಾಚಾರ್ರಿಗೆ ಬದಲಾಗಿ ಮೊಣಕಾಲ್ಮುರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಅಮಲ್ದಾರ್ರಾಗಿರತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಬಿ. ಲಕ್ಷ್ಮಣರಾಯರು ಕಾರ್ಕಾರ್ಹಳ್ಳಿ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಅಮಲ್ದಾರ್ರಾಗಿರತಕ್ಕದ್ದು.

ಎ. ಬಾವಾರಾವ್, ಬಿ. ಎ. ಯವರು ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದಿ.

ಆನೇಕಲ್ ತಾಲ್ಲೂಕು ಅಮಲ್ದಾರ್ ಸೈದ್ ಅಮೀರ್ ಹಸನ್ ಯವರು ನೆಲಮಂಗಲ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ದಾವಣಗೆರೆ ತಾಲ್ಲೂಕು ಅಮಲ್ದಾರ್ ಹೊನ್ನಪ್ಪನಾಯಡಿಯವರು ಆನೇಕಲ್ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಗ್ರಾಮದ ಡಿಪ್ಯುಟಿ ಅಮಲ್ದಾರ್ ಕೃಷ್ಣರಾಯರು ದಾವಣಗೆರೆ ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಮಳವಳ್ಳೀ ತಾ॥ ಅಮಲ್ದಾರ್ ಎ. ಗೋಪಾಲಯ್ಯಂಗಾರ್ರು ಕೆಲಸದಿಂದ ನಿವೃತ್ತರಾದ ನಂಜುಂಡ ಪೊದಲಿಯಾರ್ರಿಗೆ ಬದಲಾಗಿ ಮಾಗಡೀ ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಬೇಲೂರು ತಾಲ್ಲೂಕು ಅಮೂದಾರ್ ಎಸ್. ಕೃಷ್ಣರಾಯರು ಮಳವಳ್ಳೀ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಬೇಲೀ ನಿವಾಸರಾಯರು ಬೇಲೂರು ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಮಾಲೂರು ತಾ॥ ಅಮಲ್ದಾರ್ ನಿಜಾವುದ್ದೀ ಅಲ್ಲೀಖಾರು ಕ್ಲೋಸೆವೇಟೀ ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ರಾಜಗೋಪಾಲಾಚಾರ್ ಬಿ. ಎ. ಯವರು ಮಾಲೂರು ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಚಿಂತಾಮಣಿ ತಾ॥ ಅಮಲ್ದಾರ್ ಬಿ. ರಾಮಸ್ವಾಮಯ್ಯರ್ ಬಿ. ಎ. ಯವರು ಗೋರಿಬಿದನೂರು ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಚಳ್ಳಕೆರೇ ತಾ॥ ಅಮಲ್ದಾರ್ ವೆಂಕಟರಾಯರು ಚಿಂತಾಮಣೀ ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು. ಶಿವಮೊಗ್ಗಾ ತಾ॥ ಅಮಲ್ದಾರ್ ಸೀತಾರಾಮಯ್ಯನವರು ಚಿಲ್ಲಹಳ್ಳಿಟ್ಟು ತಾ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಸಾಗರದ ಅಮಲ್ದಾರ್ ಗುಂಡಪ್ಪನವರು ಅವರ ಖಾಯಿಷ್ ಮೇರಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಪಬ್ಲಿಕ್ ಕೆಲಸಕ್ಕೆ ವಾಪಸು ಹೋಗುವದರಿಂದ ಇವರಿಗೆ ಬದಲಿಯಾಗಿ ಪಿ. ನಂಜುಂಡನಾಯಡು ಯವರು ಸಾಗರ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಬಾದಾಮಿ ಕೃಷ್ಣರಾಯರು ನರಸಿಂಹಮೂರ್ತಿರಾಯರಿಗೆ ಬದಲಾಗಿ ಚನ್ನಪಟ್ಟಣ ತಾ॥ ಡಿಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಬಡ್ತೀ ಹೊಂದಿದ ಕೃಷ್ಣರಾಯರಿಗೆ ಬದಲಾಗಿ ಮಹಮ್ಮದ್ ರಜಾಯವರು ಗ್ರಾಮದ ಡಿಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ನಾಕರಿಯಿಂದ ನಿವೃತ್ತರಾದ ಸೀತಾರಾಮಯ್ಯನವರಿಗೆ ಬದಲಾಗಿ, ವಿ. ಕೃಷ್ಣರಾಯರು ಹುಳಿಯಾರದ ಡಿಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ತಾರೀಖು 7ನೇ ಆಗಸ್ಟ್ 1889.

ನಂ. 113.—ಇದರಿಂದ ವ್ಯಕ್ತಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಡಿಪೋಗಳಲ್ಲಿ ತೇಗ ಮತ್ತು ಯಿತರ ಜಾತಿ ಮರಗಳು ವ ಬೊಂಬುಗಳು ಮತ್ತೊಂದು ಹುಕುಂ ಕೊಡುವ ಪರಿಯಂತ ಇದರಡಿಕಂಡ ತಖ್ತೆಯಲ್ಲಿ ನಮೂದಿಸುವ ದರಗಳ ಪ್ರಕಾರ ವಿಕ್ರಯಿಸಲ್ಪಡತಕ್ಕದ್ದು.

ತರಹೆಗಳು.	ಲಕ್ಕುವಳ್ಳಿ ಡಿಪೊ.	ತರೀಕೆರೆ ಡಿಪೊ.	ಚಿಕ್ಕಮಗಳೂರು ಡಿಪೊ.
	ಘನಅಡಿ 1ಕ್ಕೆ	ಘನಅಡಿ 1ಕ್ಕೆ	ಘನಅಡಿ 1ಕ್ಕೆ
ತೇಗ, ಅವ್ವಲ್ ತರಹ	1 8 0	1 10 0	1 12 0
,, ದುಯ್ಯಂ ,, ...	1 4 0	1 6 0	1 8 0
,, ತಿಯ್ಯಂ	1 0 0	1 2 0	1 4 0
ಮನ್ನಾಜಾತಿ, ಅವ್ವಲ್ ತರಹ	0 13 0	0 15 0	1 0 0
,, ದುಯ್ಯಂ ,, ...	0 11 0	0 13 0	0 14 0
ಮನ್ನಾಜಾತಿ ಅಲ್ಲದ್ದು ಅವ್ವಲ್ ತರಹ	0 8 0	0 10 0	0 12 0
,, ದುಯ್ಯಂ ,, ...	0 7 0	0 9 0	0 11 0
ತೇಗದ ಕೂಚಗಳು	0 12 0	0 14 0	0 15 0
ಕಾಡುಜಾತಿ ಕೂಚಗಳು	0 6 0	0 8 0	0 8 0
	ದರ ನೂರಕ್ಕೆ	ದರ ನೂರಕ್ಕೆ	ದರ ನೂರಕ್ಕೆ
ಸಂಣ ಬಿದರು	5 0 0	5 8 0	6 0 0
ದೊಡ್ಡ ಬಿದರು	12 0 0	13 0 0	12 0 0

ಖಮೋಜೀವ್ ಹುಕುಂ,
ಆರ್. ವಿಜಯಾಂಬ್ರರಾವ್,
ಚೀಫ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

ಪರಿಷ್ಕರಿಸಲ್ಪಟ್ಟ ಇಸ್ತಿಹಾರ್‌ನಾಮೆ.

ತಾರೀಖು 6ನೇ ಮಾಹೆ ಆಗಸ್ಟ್ 1889ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀಯ ಪರೀಕ್ಷಾ ಸಂಬಂಧವಾದ ನಿಬಂಧನೆಗಳೂ ಮತ್ತು 1890ನೇ ಇಸವಿಯಲ್ಲಿ ನಡಿಯತಕ್ಕ ಪರೀಕ್ಷೆಗಾಗಿ ನಿರ್ಣಯಿಸಲ್ಪಟ್ಟ ಸಂಗತಿಗಳೂ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಈ ಕೆಳಗೆ ಪ್ರಕಟಿಸಲ್ಪಟ್ಟಿವೆ.

1. ಸದರೀ ಪರೀಕ್ಷೆಯು ಮಿಡಲ್‌ಸ್ಕೂಲ್ ಪರೀಕ್ಷೆಗೆ ಸಮಾನವಾದ್ದಾಗಿರುತ್ತದೆ. ಮತ್ತು ದೇಶಭಾಷೆಯಲ್ಲಿ ಮಾತ್ರ ನಡಿಸಲ್ಪಡುತ್ತದೆ.

2. ಸದರೀ ಪರೀಕ್ಷೆಯು ಪ್ರತಿ ವರ್ಷವೂ (ಅನ್ಯಥಾ ಪ್ರಸಿದ್ಧಪಡಿಸಲ್ಪಟ್ಟರೆ ವಿನಹ) ಫೆಬ್ರವರೀ ತಿಂಗಳಲ್ಲಿ ಪ್ರತಿ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳದಲ್ಲಿಯೂ ಮತ್ತು ವರ್ಷ ವರ್ಷಕ್ಕೂ ನಿರ್ಣಯಿಸಲ್ಪಡಬಹುದಾದ ಇತರ ಸ್ಥಳಗಳಲ್ಲಿ ಸಹ ನಡಿಸಲ್ಪಡುವದು. ಈ ಪರೀಕ್ಷೆಗೆ ದರಖಾಸ್ತು ಕೊಡುವ ತಾರೀಖಿಗೆ ಮುಂಚೆ ಅನುಸ್ಯೂತವಾಗಿ 8 ತಿಂಗಳು ಓದುತಲಿದ್ದ ಹಾಗೆ ನಿಶ್ಚಯಿಸಲ್ಪಡುವ ಮೈಸೂರು ದೇಶೀಯ ಸರ್ಕಾರಿ ಮತ್ತು ದ್ರವ್ಯಸಹಾಯ ಪಡೆಯತಕ್ಕ ಪಾಠಶಾಲೆಗಳ ನಾಸ್ತವ್ಯವಾದ ವಿದ್ಯಾರ್ಥಿಗಳೂ ವಿದ್ಯಾರ್ಥಿನೀಯರೂ ಇರಬಹುದಾಗಿರುತ್ತದೆ. ಮತ್ತು ಇತರರು ಸಹ ಸೇರಬಹುದು.